ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಇಲ್ಲ.

ಪಟ್ ಭೂಮಿಯಲ್ಲಿ ಗ್ರಾನೈಟ್ ತೆಗೆಯುವ ನಿಷೇಧಕ್ಕೆ ಕಾನೂನು.

399 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಪಟ್ಟಾ ಭೂಮಿಯಲ್ಲಿ ಗ್ರಾನೈಟ್ ತೆಗೆಯುವುದನ್ನು ನಿಷೇಧಿಸುವ ಕಾನೂನನ್ನು ಸರ್ಕಾರವು ತರಬಾರದೇಕೆ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) ಪಟ್ಟಾ ಭೂಮಿಯಲ್ಲಿ ಗ್ರಾನೈಟ್ ಮತ್ತಿತರ ಬೆಲೆಬಾಳುವ ಗಣಿ ಸಂಪತ್ತು ತೆಗೆಯುವುದನ್ನು ನಿಷೇಧಿಸುವ ಸಲುವಾಗಿ ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 70ಕ್ಕೆ ಸೂಕ್ತ ತಿದ್ದುಪಡಿಯನ್ನು ತರಲು ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಂಡಿರುತ್ತದೆ. ತಿದ್ದುಪಡಿ ಬಿಲ್‌ನ್ನು ಸದ್ಯದಲ್ಲಿಯೇ ಶಾಸಕಾಂಗದ ಮುಂದೆ ಮಂಡಿಸಲು ಉದ್ದೇಶಿಸಲಾಗಿದೆ.

ಭೂ ನ್ಯಾಯ ಮಂಡಲಿಗಳಲ್ಲಿ ಇತ್ಯರ್ಥವಾಗಬೇಕಾಗಿರುವ ಮೊಕದ್ದಮೆಗಳು.

400 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ರಾಜ್ಯದ ವಿವಿಧ ಭೂ ನ್ಯಾಯ ಮಂಡಳಿಗಳಲ್ಲಿ ಇನ್ನೂ ಇತ್ಯರ್ಥವಾಗ ಬೇಕಾಗಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

34607 ಮೊಕದ್ದಮೆಗಳು.

ರಸಗೊಬ್ಬರವನ್ನು ಕಡಿಮೆ ದರದಲ್ಲಿ ಹಂಚಲು ಸರ್ಕಾರದ ನಿರ್ಧಾರ.

401 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಸಗೊಬ್ಬರಗಳನ್ನು ಕಡಿಮೆ ದರದಲ್ಲಿ ರೈತರಿಗೆ ಹಂಚಲು ಸರ್ಕಾರವು ಸಬ್ಸಿಡಿ ನೀಡಲು ತೀರ್ಮಾನಿಸಿದೆಯೇ?

ಶ್ರೀ ಎನ್. ಚಿಕ್ಕೆಗೌಡ (ಕೃಷಿ ಸಚಿವರು):

ಅ) ಹೌದು.

ರಂಜಕ, ಪೊಟ್ಯಾಷ್ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳನ್ನು ಅನಿಯಂತ್ರಣಗೊಳಿಸಿದ ಮೇಲೆ ಉದ್ಭವಿಸಿರುವ ರಸಗೊಬ್ಬರಗಳ ಬೆಲೆ ಏರಿಕೆಯ ಹೊರೆಯನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರ ನೀಡಿರುವ 17.53 ಕೋಟಿ ರೂಪಾಯಿಗಳನ್ನು ಬಳಸಿಕೊಂಡು 2,39,900 ಟನ್ ರಸಗೊಬ್ಬರಗಳನ್ನು ಸಬ್ಸಿಡಿ ದರದಲ್ಲಿ ರೈತರಿಗೆ ಹಂಚುವ ಯೋಜನೆಯನ್ನು ಈ ಹಿಂಗಾರಿನಲ್ಲಿ ಜಾರಿಗೊಳಿಸಲಾಗಿದೆ.

ಇದಲ್ಲದೆ ಕೇಂದ್ರ ಸರ್ಕಾರವು ರೂಪಿಸಿರುವ ವಿಶೇಷ ಯೋಜನೆಯಡಿಯಲ್ಲಿ 1993ನೇ ಸಾಲಿನಲ್ಲಿ (ಜನವರಿಯಿಂದ-ಡಿಸೆಂಬರ್‌ವರೆವಿಗೂ) ರಂಜಕ, ಪೊಟಾಸ್ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳ 36.66 ಲಕ್ಷ ಚೀಲಗಳನ್ನು, ಪ್ರತಿ ಚೀಲಕ್ಕೆ

75 ರೂಪಾಯಿಗಳ ಸಬ್ಸಿಡಿ ನೀಡಿ ಕಡಿಮೆ ದರದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹಂಚಲು 27.50 ಕೋಟಿ ರೂಪಾಯಿಗಳನ್ನು ಒದಗಿಸಿ ಯೋಜನೆಯನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿರುವ ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ.

394 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವಿರೆ?

ಅ) ರಾಜ್ಯದಲ್ಲಿರುವ ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ ಎಷ್ಟು?

ಆ) ಈ ಪೈಕಿ ಲಾಭದಲ್ಲಿ ನಡೆಯುತ್ತಿರುವ ಗಿರಣಿಗಳು ಮತ್ತು ನಷ್ಟದಲ್ಲಿ ನಡೆಯುತ್ತಿರುವ ಗಿರಣಿಗಳೆಷ್ಟು? (ಈ ಎಲ್ಲಾ ಗಿರಣಿಗಳ ಹೆಸರುಗಳನ್ನು ನೀಡುವುದು) ;

ಇ) ನಷ್ಟದಲ್ಲಿರುವ ಘಟಕಗಳನ್ನು ಲಾಭದಾಯಕವಾಗಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳಾವುವು ?

ಈ) ಮುಚ್ಚಲಾಗಿದ್ದ ನೂಲಿನ ಗಿರಣಿಗಳ ಸಂಖ್ಯೆ ಎಷ್ಟು ?

ಉ) ಸರ್ಕಾರ ಈ ಘಟಕಗಳನ್ನು ಪುನರುಜ್ಜೀವನಗೊಳಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ 18 ಸಹಕಾರಿ ನೂಲಿನ ಗಿರಣಿಗಳು ನೋಂದಾಯಿತವಾಗಿದ್ದು ಅವುಗಳ ವಿವರ ಈ ಕೆಳಗಿನಂತಿವೆ :

1) ಕಾರ್ಯನಿರ್ವಹಿಸುತ್ತಿರುವ ಗಿರಣಿಗಳು	11
2) ಸ್ಥಾಪನೆ ಹಂತದಲ್ಲಿರುವ ಗಿರಣಿಗಳು	1
3) ಉಳಿದ ಗಿರಣಿಗಳು (ಸ್ಥಾಪನೆಯಾಗಬೇಕಾದುದು)	6
ಒಟ್ಟು	18

ಆ) ಲಾಭದಲ್ಲಿ ನಡೆಯುತ್ತಿರುವ ಗಿರಣಿಗಳು :

1) ಬನಹಟ್ಟಿ ಸಹಕಾರಿ ನೂಲಿನ ಗಿರಣಿ, ಬನಹಟ್ಟಿ, ಬಿಜಾಪುರ ಜಿಲ್ಲೆ.
2) ಗದಗ ಸಹಕಾರ ಜವಳಿ ನೂಲಿನ ಗಿರಣಿ, ಹುಲಿಕೋಟಿ, ಧಾರವಾಡ ಜಿಲ್ಲೆ.

ನಷ್ಟದಲ್ಲಿರುವ ಗಿರಣಿಗಳು

1) ರೈತರ ಸಹಕಾರಿ ನೂಲಿನ ಗಿರಣಿ, ಹುಲಿಕೋಟಿ, ಧಾರವಾಡ ಜಿಲ್ಲೆ.
2) ಬೆಳಗಾಮ್ ಸಹಕಾರಿ ನೂಲಿನ ಗಿರಣಿ, ಪಂತ್ ಬಾಳೆಕುಂದ್ರಿ, ಬೆಳಗಾಂ.
3) ಮಲಪ್ರಬಾ ಸಹಕಾರಿ ನೂಲಿನ ಗಿರಣಿ, ಸೌಂದತ್ತಿ, ಬೆಳಗಾಂ ಜಿಲ್ಲೆ.
4) ತುಂಗಭದ್ರ ರೈತರ ಸಹಕಾರಿ ನೂಲಿನ ಗಿರಣಿ, ರಾಣಿಬನ್ನೂರು.
5) ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ, ಲಕ್ಕೇಶ್ವರ.
6) ಬಿಜಾಪುರ ಸಹಕಾರಿ ನೂಲಿನ ಗಿರಣಿ, ಬಿಜಾಪುರ.
7) ಬಾಗಲಕೋಟಿ ಸಹಕಾರಿ ನೂಲಿನ ಗಿರಣಿ, ಬಾಗಲಕೋಟೆ.
8) ರಾಯಚೂರು ಸಹಕಾರಿ ನೂಲಿನ ಗಿರಣಿ, ರಾಯಚೂರು.
9) ವೆಂಕಟೇಶ್ ಸಹಕಾರಿ ನೂಲಿನ ಗಿರಣಿ, ಅಣ್ಣಿಗೇರಿ, ಧಾರವಾಡ ಜಿಲ್ಲೆ.